ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಬೇಲೂರು.

ಸಿಸಿ ನಂ.:- 29 /2019

| | | |
|---|---|---|
| ಹೆಸರು | ಸಂತೋಷ್ | |
| ತಂದೆ ಹೆಸರು | ಹಿರಿಗಯ್ಯ | |
| ವಯಸ್ಸು | 30 | ಸಿ.ಡಬ್ಲು: 4 |
| ಉದ್ಯೋಗ | ಹೋಂ ಗಾರ್ಡ್ | ಪಿ.ಡಬ್ಲು: 2 |
| ವಾಸ | ಕೋಟಿಗನಹಳ್ಳಿ | |

ಸಾಕ್ಷಿಯನ್ನು ದಿಃ 29.12.2021 ರಂದು ಕರೆಸಲಾಯಿತು. ಪ್ರಮಾಣ ಬೋಧಿಸಲಾಗಿಯಿತು.

ಮುಖ್ಯ ವಿಚಾರಣೆ ಃ ಅಭಿಯೋಜನೆ ಪರ ಸಸಅ ರವರಿಂದಃ

ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ನಾನು ಅಪಘಾತವನ್ನು ಖುದ್ದು ನೋಡಿದ್ದೇನೆ ಎಂದು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ಮಾಡಿಕೊಡಬೇಕೆಂದು ಕೋರಿರುತ್ತಾರೆ. ದಾಖಲೆಯನ್ನು ಪರಿಶೀಲಿಸಿ ಪಾಟೀ ಸವಾಲಿಗೆ ಅಳವಡಿಸಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಃ ಅಭಿಯೋಜನೆ ಪರ ಸಸಅ ರವರಿಂದಃ

ದಿಃ 05.11.2018 ರಂದು ರಾತ್ರಿ 10.20 ಗಂಟೆ ಸಮಯದಲ್ಲಿ ಆರೋಪಿ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಟ್ರಾಕ್ಟರ್ ಗೆ ಡಿಕ್ಕಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಟ್ರಾಕ್ಟರ್ ಮತ್ತು ಟ್ರೈಲರ್ ಬೇರೆ ಬೇರೆ ಆಗಿತ್ತು ಎಂದರೆ ಸರಿಯಲ್ಲ. ಈ ಅಪಘಾತ ಆರೋಪಿ ತಪ್ಪಿನಿಂದ ಸಂಭವಿಸಿದ್ದು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಲಾದ ಹೇಳಿಕೆ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ಈ ಅಪಘಾತದ ಬಗ್ಗೆ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಟಿ ಪಿ ವಕೀಲರುಃ

ಇಲ್ಲ.

ಮರು ವಿಚಾರಣೆಃ ಇಲ್ಲ

(ಉಕ್ತಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣ ಯಂತ್ರದ ಮೂಲಕ ಬೆರಳಚ್ಚು ಮಾಡಲಾಯಿತು) ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು